4026/5068/6028/7028

**V Semester 3 Year LL.B. /VI Semester 5 Year B.A. LL.B. (Maj. Min. System)/ B.B.A.LL.B./B.Com. LL.B. Examination, October/November 2022 (June 2022)**

**COMPANY LAW**

Duration : 3 Hours Max. Marks : 80

**Instructions : 1. Answer all five Units.**
**2. One essay type question and short note/problems is compulsory from each Unit.**
**3. Figures to the right indicate marks.**
**4. Answer should be written either in English or Kannada completely.**

UNIT – I

Q. No. 1. a) What are the advantages of incorporation of a company ? Marks : 10

ಕಂಪನಿಯ ಸಂಸ್ಥಾಪನೆಯಿಂದಾಗುವ ಅನುಕೂಲತೆಗಳಾವುವು ?

OR/ಅಥವಾ

Q. No. 1. a) Who is a promoter ? What are his duties and liabilities ? Marks : 10

ಪ್ರವರ್ತಕನೆಂದರೆ ಯಾರು ? ಪ್ರವರ್ತಕನ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಯಾವುವು ?

Q. No. 1. b) 'L' incorporated a company of which he was the Managing Director. In that capacity he appointed himself as a pilot of the company. While on the duty he died in a flying accident. His widow claims compensation against company. Will she succeed ? Marks : 6

'ಎಲ್' ಒಂದು ಕಂಪನಿಯನ್ನು ಅಸ್ತಿತ್ವಕ್ಕೆ ತಂದು ಅದರ ವ್ಯವಸ್ಥಾಪಕ ನಿರ್ದೇಶಕನಾಗುತ್ತಾನೆ. ಅದೇ ರೀತಿ ತನ್ನನ್ನೇ ಕಂಪನಿಯ ವಿಮಾನ ಚಾಲಕನೆಂದು ನೇಮಿಸಿಕೊಳ್ಳುತ್ತಾನೆ. ಆತ ಕರ್ತವ್ಯನಿರತನಾಗಿದ್ದಾಗ ವಿಮಾನ ಅಪಘಾತದಲ್ಲಿ ಮರಣ ಹೊಂದುತ್ತಾನೆ. ಆತನ ಹೆಂಡತಿ ಪರಿಹಾರ ಕೋರಿ ಕಂಪನಿ ವಿರುದ್ಧ ದಾವೆ ಹೂಡುತ್ತಾಳೆ. ಆಕೆ ಗೆಲ್ಲುವಳೇ ?

OR/ಅಥವಾ

Q. No. 1. b) 'A' transferred certain land to 'B' on a condition that 'B' would never sell the land to coloured persons. 'B' sold the land to a company composed exclusively of Negroes. 'A' took action for the annualment of this conveyance on the ground that the property in effect had passed to the coloured persons. Will he succeed ? Marks : 6

'A' ಯು ತನ್ನ ಭೂಮಿಯನ್ನು ವರ್ಣೀಯ ಜನರಿಗೆ ಮಾರಬಾರದು ಎಂಬ ಷರತ್ತಿನ ಮೇಲೆ 'B' ಗೆ ಮಾರಿದನು. ಆದರೆ 'B' ಯು ನೀಗ್ರೋಗಳಿಗೆ ಸಂಬಂಧಿಸಿದ ಕಂಪನಿಗೆ ಈ ಭೂಮಿಯನ್ನು ಮಾರಿದನು. 'A' ಯು ತನ್ನ ಷರತ್ತನ್ನು ಉಲ್ಲಂಘಿಸಿದ ಕಾರಣದ ಮೇಲೆ ಈ ಮಾರಾಟವನ್ನು ರದ್ದು ಮಾಡಲು ದಾವೆ ಹೂಡುವನು. ಅವನು ಜಯಗಳಿಸುವನೇ ?

## UNIT – II

Q. No. 2. a) What is memorandum of Association ? State the procedure for alteration of objective clause of a company. Marks : 10

ಮನವಿ ಪತ್ರ ಎಂದರೇನು ? ಕಂಪನಿಯ ಉದ್ದೇಶ ವಿಭಾಗವನ್ನು ಬದಲಾಯಿಸಲು ನಿರ್ವಹಿಸಬೇಕಾದ ಪ್ರಕ್ರಿಯೆಗಳನ್ನು ತಿಳಿಸಿ.

OR/ಅಥವಾ

Q. No. 2. a) Explain the doctrine of Indoor management with exceptions. Marks : 10

ಒಳಾಡಳಿತದ ಸಿದ್ಧಾಂತವನ್ನು ಅಪವಾದಗಳೊಂದಿಗೆ ವಿವರಿಸಿರಿ.

Q. No. 2. b) One of the objectives of the company 'Y' was to manufacture mechanical spares and to market them. The company 'Y' intended to manufacture gold ornaments and to sell them. Advise 'Y' company. Marks : 6

ಕೈಗಾರಿಕಾ ಬಿಡಿ ಭಾಗಗಳನ್ನು ತಯಾರಿಸಿ ಮತ್ತು ಮಾರುಕಟ್ಟೆ ಮಾಡುವ ಉದ್ದೇಶದಿಂದ 'Y' ಎಂಬ ಕಂಪನಿಯನ್ನು ಸ್ಥಾಪಿಸಲಾಗಿರುತ್ತದೆ. ಈಗ 'Y' ಕಂಪನಿಯು ಚಿನ್ನದ ಒಡವೆಗಳನ್ನು ತಯಾರಿಸಿ ಮಾರಾಟವನ್ನು ಮಾಡಲು ಬಯಸುತ್ತದೆ. 'Y' ಕಂಪನಿಗೆ ಸಲಹೆ ಕೊಡಿರಿ.

OR/ಅಥವಾ

Q. No. 2. b) A company issued an advertisement in a newspaper stating that some shares were still available for sale according to the terms of the prospectus of the company which could be obtained on application. Do you consider it as a prospectus ? Marks : 6

ಒಂದು ಕಂಪನಿಯು ವರ್ತಮಾನ ಪತ್ರಿಕೆಯೊಂದರಲ್ಲಿ ಜಾಹೀರಾತನ್ನು ಪ್ರಕಟಿಸಿ ಕಂಪನಿಯ ಷೇರುಗಳು ಇನ್ನೂ ಮಾರಾಟಕ್ಕೆ ಉಳಿದಿದ್ದು, ಯಾರಾದರೂ ಬಯಸಿದರೆ ಅರ್ಜಿ ಸಲ್ಲಿಸಿ ಪಡೆಯಬಹುದೆಂದು ತಿಳಿಸಿತು. ಅದನ್ನು ಪರಿಚಯ ಪತ್ರವೆಂದು ನೀವು ಪರಿಗಣಿಸುವಿರಾ ?

## UNIT – III

Q. No. 3. a) Who is a Director ? Explain the powers and duties of the Directors. Marks : 10

ನಿರ್ದೇಶಕ ಎಂದರೆ ಯಾರು ? ನಿರ್ದೇಶಕರ ಅಧಿಕಾರ ಮತ್ತು ಕರ್ತವ್ಯಗಳ ಬಗೆಗೆ ವಿವರಿಸಿರಿ.

OR/ಅಥವಾ

Q. No. 3. a) Discuss briefly the conditions of relief for oppression in the company. Marks : 10

ಕಂಪನಿಯಲ್ಲಿನ ದಬ್ಬಾಳಿಕೆಯ ಕುರಿತಾದ ಪರಿಹಾರದ ನಿರ್ಬಂಧನೆಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

Q. No. 3. b) Certain Directors held a meeting of the Board. But they prevented some lawfully constituted Directors from attending the meeting. A quorum was however present. Whether the Board meeting is valid ? Marks : 6

ಕೆಲವು ನಿರ್ದೇಶಕರು ಮಂಡಳಿಯ ಸಭೆಯನ್ನು ನಡೆಸುತ್ತಾರೆ. ಆದರೆ ಅವರು ಕೆಲವು ಕಾನೂನುಬದ್ಧ ಮಂಡಳಿಯ ನಿರ್ದೇಶಕರು ಸಭೆಗೆ ಹಾಜರಾಗುವುದನ್ನು ತಡೆಯುತ್ತಾರೆ. ಆದಾಗ್ಯೂ ಸಭೆಯಲ್ಲಿ ಕೋರಂ ಇರುತ್ತದೆ. ಮಂಡಳಿಯ ಈ ಸಭೆಯು ಕಾನೂನುಬದ್ಧವೇ ?

OR/ಅಥವಾ

Q. No. 3. b) The minority shareholders in a company brought an action against the directors alleging that they were responsible for losses which they had been incured. Will they succeed in their action ? Marks : 6

ಕಂಪನಿ ಅನುಭವಿಸಿದ ನಷ್ಟಕ್ಕೆ ನಿರ್ದೇಶಕರು ಕಾರಣರೆಂದು ಆಪಾದಿಸಿ ಅಲ್ಪಸಂಖ್ಯಾತ ಷೇರುದಾರರು ಅವರ ವಿರುದ್ಧ ಕ್ರಮವನ್ನು ಜರುಗಿಸಿದರು. ಅವರು ತಮ್ಮ ಪ್ರಯತ್ನದಲ್ಲಿ ಯಶಸ್ಸು ಸಾಧಿಸುವರೇ ?

## UNIT – IV

Q. No. 4. a) Describe the general principles and statutory restrictions for the allotment of shares. Marks : 10

ಷೇರುಗಳ ಹಂಚಿಕೆಯ ಸಾಮಾನ್ಯ ನಿಯಮಗಳು ಮತ್ತು ಶಾಸನಬದ್ಧ ನಿಬಂಧನೆಗಳನ್ನು ವಿವರಿಸಿ.

OR/ಅಥವಾ

Q. No. 4. a) What is floating charge ? When will floating charge crystallise ? Marks : 10

ತೇಲುವ ಋಣಭಾರ ಎಂದರೇನು ? ಯಾವ ಸಂದರ್ಭಗಳಲ್ಲಿ ತೇಲುವ ಋಣಭಾರವು ಸ್ಪಟಿಕೀಕರಣಗೊಳ್ಳುತ್ತದೆ ?

Q. No. 4. b) The Directors of a company by two resolutions resolved to make a call. But neither resolutions have specified the date and amount of payment . Is the call valid ? Marks : 6

ಒಂದು ಕಂಪನಿಯ ನಿರ್ದೇಶಕರು ಷೇರುಗಳ ಮೇಲಿನ ಕಂತಿನ ಹಣಕ್ಕಾಗಿ ಎರಡು ಗೊತ್ತುವಳಿಗಳ ಮೂಲಕ ಕರೆ ಮಾಡಿದರು. ಆದರೆ ಯಾವುದೇ ಗೊತ್ತುವಳಿಯಲ್ಲೂ ದಿನಾಂಕ ಮತ್ತು ಹಣದ ಮೊತ್ತವನ್ನು ನಮೂದಿಸಿರುವುದಿಲ್ಲ. ಈ ಕರೆಯು ಊರ್ಜಿತವೇ ?

OR/ಅಥವಾ

Q. No. 4. b) 'X' a minor was registered as a shareholder. After attaining the majority he received dividend from the company. Subsequently company went into liquidation, 'X' denies his liability. Decide. Marks : 6

'X' ಎಂಬ ಅಪ್ರಾಪ್ತನು ಒಂದು ಕಂಪನಿಯ ಸದಸ್ಯನಾಗಿ ನೋಂದಾಯಿಸಲ್ಪಟ್ಟನು. ಅವನು ಪ್ರಾಪ್ತ ವಯಸ್ಕನಾದ ಬಳಿಕ ಕಂಪನಿಯಿಂದ ಲಾಭಾಂಶವನ್ನು ಸ್ವೀಕರಿಸುತ್ತಾನೆ. ತದನಂತರ ಕಂಪನಿಯು ಸಮಾಪನೆಯಾಗುತ್ತದೆ. 'X' ನು ತನ್ನ ಹೊಣೆಗಾರಿಕೆಯನ್ನು ಅಲ್ಲಗಳೆಯುತ್ತಾನೆ. ತೀರ್ಮಾನಿಸಿ.

## UNIT – V

Q. No. 5. a) Explain when a National Company Law Tribunal (NCLT) can order for winding up of a company. Marks : 10

ಯಾವಾಗ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣವು ಒಂದು ಕಂಪನಿಯನ್ನು ಸಮಾಪನೆಗೊಳಿಸಲು ಆಜ್ಞೆ ಮಾಡಬಲ್ಲದು ಎಂಬುದನ್ನು ವಿವರಿಸಿರಿ.

OR/ಅಥವಾ

Q. No. 5. a) Discuss the members voluntary winding up of a company. Marks : 10

ಸದಸ್ಯರ ಸ್ವ-ಇಚ್ಛೆಯ ಮೇರೆಗಿನ ಕಂಪನಿಯ ಸಮಾಪನೆಯ ಕುರಿತು ಚರ್ಚಿಸಿರಿ.

Q. No. 5. b) 'A' and 'B' were only shareholders as well as directors of a private company. Some serious differences developed between them and they became hostile with each other. 'A' seeks legal advise from you. Advise 'A'. Marks : 6

'ಅ' ಮತ್ತು 'ಬ' ಎಂಬುವವರು ಇಬ್ಬರೇ ಇರುವ ಒಂದು ಖಾಸಗಿ ಕಂಪನಿಯ ಷೇರುದಾರರು ಹಾಗೂ ನಿರ್ದೇಶಕರು ಆಗಿದ್ದರು. ನಂತರದಲ್ಲಿ ಅವರಿಬ್ಬರ ಮಧ್ಯದಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿ ಹಗೆತನವು ಬೆಳೆಯಿತು. 'ಅ' ನು ನಿಮ್ಮಿಂದ ಕಾನೂನು ಸಲಹೆ ಬಯಸುತ್ತಾನೆ. 'ಅ' ನಿಗೆ ಸಲಹೆ ನೀಡಿರಿ.

OR/ಅಥವಾ

Q. No. 5. b) Due to Tsunami disaster, 'X' company suspends its business for more than one year. A shareholder in that company submits an application to the court for its winding up. Will he succeed ? Marks : 6

ಸುನಾಮಿ ಕಾರಣದಿಂದ 'X' ಎಂಬ ಕಂಪನಿಯು ತನ್ನ ವ್ಯವಹಾರವನ್ನು ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ಅಮಾನತುಗೊಳಿಸಿತು. ಕಂಪನಿಯ ಷೇರುದಾರನೊಬ್ಬನು ಈ ಕಾರಣದ ಮೇಲೆ ಕಂಪನಿಯ ಸಮಾಪನೆಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾನೆ. ಅವನು ಗೆಲ್ಲುವನೇ ?

---